(06)

# ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಸಿ.ಎನ್. ಮಂಜೇಗೌಡ ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು ಇವರು ಸದನದಲ್ಲಿ ಮಂಡಿಸಿದ ಶೂನ್ಯ ವೇಳೆ ಪ್ರಸ್ತಾವನೆಗೆ ಉತ್ತರ ಸಲ್ಲಿಸುವ ಬಗ್ಗೆ.**

**ಪ್ರಸ್ತಾವನೆ:**

ಕನಕಪುರ ತಾಲ್ಲೂಕು, ಹೆಗ್ಗನೂರುದೊಡ್ಡಿ ಗ್ರಾಮದ ರೈತ ಶ್ರೀ ಮುತ್ತುರಾಜು ಎಂಬುವವರ ಕುರಿಗಳಿಗೆ ಪಶುವೈದ್ಯಾಧಿಕಾರಿಗಳು ಅವಧಿ ಮೀರಿದ ಜಂತುಹುಳು ಔಷಧಿಯನ್ನು ನೀಡಿದ ಪರಿಣಾಮ ಕುರಿಗಳು ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟವರ ವಿರುದ್ಧ ಶಿಸ್ತುಕ್ರಮ ಕೈಗೊಂಡು ರೈತರಿಗೆ ಪರಿಹಾರ ಒದಗಿಸುವ ಬಗ್ಗೆ.

**ಉತ್ತರ:-**

ಕನಕಪುರ ತಾಲ್ಲೂಕಿನ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಹೆಗ್ಗನೂರು ಸಂಸ್ಥೆಯಲ್ಲಿ ಹೆಗ್ಗನೂರುದೊಡ್ಡಿ ಗ್ರಾಮದ ಶ್ರೀ ಮುತ್ತುರಾಜು ಇವರಿಗೆ ದಿನಾಂಕ:27.05.2024 ರಂದು 200 ಕುರಿಗಳಿಗೆ ಜಂತು ನಾಶಕ ಔಷಧಿ ಕುಡಿಸಲು ವಿತರಿಸಲಾಗಿದೆ.

ಆದರೆ, ಶ್ರೀ ಮುತ್ತುರಾಜ್ ಇವರು ದಿನಾಂಕ:04.07.2024 ರಂದು ಬೆಳಿಗ್ಗೆ ತಮ್ಮ ಕುರಿಗಳಿಗೆ ಜಂತುನಾಶಕ ಔಷಧಿಯನ್ನು ಕುಡಿಸಿರುತ್ತಾರೆ. ಸಂಜೆ ವೇಳೆಗೆ 10 ಕುರಿಗಳ ಆರೋಗ್ಯದಲ್ಲಿ ಏರುಪೇರಾಗಿರುತ್ತದೆ. ಪಶುವೈದ್ಯಾಧಿಕಾರಿ, ಪಶು ಚಿಕಿತ್ಸಾಲಯ, ಹಲಸೂರು ಇವರು ಸದರಿ ಕುರಿಗಳಿಗೆ ದಿನಾಂಕ:05.07.2024 ರಂದು ಚಿಕಿತ್ಸೆ ನೀಡಿರುತ್ತಾರೆ. ಆದರೆ ದಿನಾಂಕ:08.07.2024 ರಂದು 5 ಕುರಿಗಳು ಸಾವನಪ್ಪಿದ್ದು, ಮರಣ ಹೊಂದಿದ 5 ಕುರಿಗಳ ಮರಣೋತ್ತರ ಪರೀಕ್ಷೆಯನ್ನು ಕನಕಪುರ ತಾಲ್ಲೂಕಿನ ಮುಖ್ಯಪಶುವೈದ್ಯಾಧಿಕಾರಿ (ಆಡಳಿತ) ಹಾಗೂ ಪಶುವೈದ್ಯಾಧಿಕಾರಿ, ಪಶು ಚಿಕಿತ್ಸಾಲಯ, ಹಲಸೂರು ಇವರುಗಳು ನಡೆಸಿ, ಅನುಗ್ರಹ ಯೋಜನೆಯಡಿ ಪರಿಹಾರ ನೀಡಲು ಶಿಫಾರಸ್ಸು ಮಾಡಿರುತ್ತಾರೆ. ಉಳಿದ ಎಲ್ಲಾ ಕುರಿಗಳು ಚಿಕಿತ್ಸೆಯಿಂದ ಚೇತರಿಸಿಕೊಂಡಿದ್ದು, ನಂತರ ಯಾವುದೇ ಸಾವುಗಳಾಗಿರುವುದಿಲ್ಲ.

ದಿನಾಂಕ:11.07.2024ರಂದು ಉಪ ನಿರ್ದೇಶಕರು(ಆಡಳಿತ), ರಾಮನಗರ ಇವರು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ, ಹೆಗ್ಗನೂರಿಗೆ ಭೇಟಿ ನೀಡಿ ಪರಿಶೀಲಿಸಿದಾಗ, ಸದರಿ ಕುರಿಗಳಿಗೆ ನೀಡಲಾಗಿದ್ದ ಜಂತುನಾಶಕ ಔಷಧಿಯ ಅವಧಿಯು ಸೆಪ್ಟೆಂಬರ್-2025 ರವರೆಗೆ ಇರುವುದು ಕಂಡು ಬಂದಿರುತ್ತದೆ.

**ಇ- ಪಸಂಮೀ 118 ಸಲೆವಿ 2024**

(signature)

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**